# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿಶೇಷ ಆಯುಕ್ತರು(ಆರೋಗ್ಯ)ರವರ ಕಛೇರಿ, ಬಿ.ಬಿ.ಎಂ.ಪಿ ಕೇಂದ್ರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು-02.

ಸಂಖ್ಯೆ: ವಿ.ಆ(ಆ)/ಪಿ.ಆರ್/ /2020-21 ದಿನಾಂಕ: 16-07-2020

## ಕಛೇರಿ ಆದೇಶ

ವಿಷಯ: ಕೋವಿಡ್-19 Asymptomatic ಪ್ರಕರಣಗಳನ್ನು RTPCR ಮತ್ತು RA test ಗಳನ್ನು containment ವಲಯದಲ್ಲಿ ಪರೀಕ್ಷೆ ಮಾಡುವ ಬಗ್ಗೆ

ಉಲ್ಲೇಖ: 1. ದಿನಾಂಕ:07-07-2020ರಂದು ಮಾನ್ಯ ಆಯುಕ್ತರವರ ಸುತ್ತೋಲೆ.
2. ದಿನಾಂಕ:15-07-2020ರಂದು ಅಪರ ಕಾರ್ಯದರ್ಶಿರವರು ಮೌಖಿಕ ಆದೇಶದಂತೆ.
3. ದಿನಾಂಕ:15-07-2020ರಂದು ವಿಶೇಷ ಆಯುಕ್ತರು(ಆರೋಗ್ಯ)ರವರ ಸುತ್ತೋಲೆಯಂತೆ.
4. ದಿನಾಂಕ:16-07-2020ರಂದು ಹೆಚ್ಚುವರಿ ಮುಖ್ಯ ಕಾರ್ಯದರ್ಶಿರವರೊಂದಿಗೆ ಚರ್ಚಿಸಿರುವಂತೆ.

***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕರೋನಾ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ಶೀತ ಮತ್ತು ಉಸಿರಾಟ ಸಂಬಂಧಿ ಖಾಯಿಲೆಗಳಿಂದ ಬಳಲುತ್ತಿರುವ ಪ್ರಕರಣಗಳ ತಪಾಸಣಾ, ಗಂಟಲು ದ್ರವದ ಮಾದರಿಯ ಸಂಗ್ರಹಣೆ ಮತ್ತು ಹೆಚ್ಚಿನ ಚಿಕಿತ್ಸೆಗೆ ಶಿಫಾರಸ್ಸು ಮಾಡಲು ಪಾಲಿಕೆಯ ವ್ಯಾಪ್ತಿಯಲ್ಲಿರುವ 198 ವಾರ್ಡ್‌ಗಳಿರುವ ಎಲ್ಲಾ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಜ್ವರ ಚಿಕಿತ್ಸಾಲಯಗಳನ್ನು ಸ್ಥಾಪಿಸಿ, ಗಂಟಲು ದ್ರವ ಪರೀಕ್ಷೆ ಮಾಡಲು ಉಲ್ಲೇಖ(1)ರಲ್ಲಿ ಮಾನ್ಯ ಆಯುಕ್ತರವರು ಸೂಚಿಸಲಾಗಿದ್ದು, ಮುಂದುವರೆಯುತ್ತಾ, ಸದರಿ ದ್ರವ ಪರೀಕ್ಷೆ ಮಾಡುವ ಸಂದರ್ಭದಲ್ಲಿ Symptomatic and Asymptomatic ಪ್ರಕರಣಗಳಿಗೆ ಪ್ರತ್ಯೇಕವಾಗಿ ಗಂಟಲಿನ ದ್ರವ ಮಾದರಿ ಪರೀಕ್ಷೆ ಮಾಡಿ ಸಂಗ್ರಹಣೆ ಮಾಡಲು ಸೂಚಿಸಿರುತ್ತಾರೆ.

ಅದರಂತೆ, ಉಲ್ಲೇಖ(3)ರ ವಿಶೇಷ ಆಯುಕ್ತರು(ಆರೋಗ್ಯ)ರವರ ಸುತ್ತೋಲೆಯಲ್ಲಿ ಸೂಚಿಸಿರುವಂತೆ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಬರುವ containment ವಲಯದಲ್ಲಿ ಇರುವ comorbid ಪ್ರಕರಣಗಳ linelisting ಸಿದ್ಧಪಡಿಸಿಕೊಂಡು ತಮಗೆ ನೀಡಲಾಗಿರುವ ವಾಹನದೊಂದಿಗೆ ಶೇಕಡಾ 30ರಷ್ಟು RA ಕಿಟ್‌ಗಳನ್ನು ದಾಸ್ತಾನು ಮಾಡಿಕೊಂಡು ಉಳಿಕೆ ಕಿಟ್ಟಿನೊಂದಿಗೆ ತಂಡವನ್ನು ರಚಿಸಿಕೊಂಡು ಈಗಾಗಲೇ ಗುರುತಿಸಿರುವ containment ವಲಯದಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಂಜೆಯವರೆಗೆ ಅವಶ್ಯಕ್ಕೆ ಅನುಗುಣವಾಗಿ ನಿರ್ಧರಿಸಿ RTPCR ಅಥವಾ RA test ಪರೀಕ್ಷೆ ನಡೆಸಲು ಕ್ರಮವಹಿಸುವುದು. ಪರೀಕ್ಷೆಯ ಪಲಿತಾಂಶವನ್ನು ಐ.ಸಿ.ಎಂ.ಆರ್ ನೀಡಿರುವ ಸಲಹೆಗಳ ಮಾರ್ಗಸೂಚಿಗಳ ಅನ್ವಯ ಮುಂದಿನ ಆದೇಶದವರೆಗೆ ಪರೀಕ್ಷಿಸಲು ಈ ಮೂಲಕ ಆದೇಶಿಸಿದೆ.

16/7/2020

ವಿಶೇಷ ಆಯುಕ್ತರು(ಆರೋಗ್ಯ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ

ಪ್ರತಿಯನ್ನು :

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತಶಾಖೆಯ ಮೂಲಕ ಸಲ್ಲಿಸಿದೆ.
2. ಮುಖ್ಯ ಆರೋಗ್ಯಾಧಿಕಾರಿಗಳು(ಸಾ.ಆ/ಕ್ಲಿನಿಕಲ್), ಬಿಬಿಎಂಪಿ ರವರ ಮಾಹಿತಿಗಾಗಿ
3. ಡಿ.ಹೆಚ್.ಓ, ಬೆಂಗಳೂರು ನಗರ ಜಿಲ್ಲೆ ರವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ
4. ಆರೋಗ್ಯಾಧಿಕಾರಿಗಳು, ಬಿಬಿಎಂಪಿ (ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯ)ರವರ ಮಾಹಿತಿಗಾಗಿ
5. ಸರ್ವೇಕ್ಷಣಾಧಿಕಾರಿ, ಬಿಬಿಎಂಪಿ/ಬೆಂಗಳೂರು ನಗರ ಜಿಲ್ಲೆ ರವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ

Scanned with CamScanner